ವಿಷಯ: ಬೀಜ ಪರೀಕ್ಷೆ ಪ್ರಯೋಗಾಲಯ

1141 (1729)

ಶ್ರೀ ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ): ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಯಾವ ಯಾವ ಕಡೆಗಳಲ್ಲಿ ರೈತರಿಗೆ ಉತ್ತಮವಾದ ಬೀಜಗಳನ್ನು ಖರೀದಸಲು ಬೀಜ ಪರೀಕ್ಷಣಾ ಪ್ರಯೋಗ ಶಾಲೆಗಳು ಇವೆ.

ಆ) ಎಲ್ಲಾ ಜಿಲ್ಲೆಗಳಲ್ಲಿ ಬೀಜ ಪರೀಕ್ಷಣ ಪ್ರಯೋಗ ಶಾಲೆಗಳನ್ನು ತೆರೆಯುವ ಯೋಜನೆ ಸರ್ಕಾರದ ಮುಂದೆ ಇದೆಯೇ?

ಶ್ರೀ ಸಿ.ಬೈರೇಗೌಡ (ಕೃಷಿ ಸಚಿವರು):

ಅ) ರಾಜ್ಯದಲ್ಲಿ ಬಿತ್ತನೆ ಬೀಜಗಳ ವಿಶ್ಲೇಷಣೆಗೆ ಬೆಂಗಳೂರು, ದಾವಣಗೆರೆ ಮತ್ತು ಧಾರವಾಡಗಳಲ್ಲಿ ಬೀಜ ಪರೀಕ್ಷಾ ಪ್ರಯೋಗ ಶಾಲೆಗಳು ಇವೆ.

ಆ) ಇಲ್ಲ.

ವಿಷಯ: ಭೂಸಾರ ಸಂರಕ್ಷಣೆ ಕಾಮಗಾರಿಗಳು

1142 (1730)

ಶ್ರೀ ಕೆ.ಪ್ರತಾಪಚಂದ್ರಶೆಟ್ಟಿ (ಕುಂದಾಪುರ): ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಭೂಸಾರ ಸಂರಕ್ಷಣೆ ಹೆಸರಿನ ಅಡಿಯಲ್ಲಿ ಮುಂಡಾತ್ತಿ, ಅವರ್ಸೆ, ಬಿಲ್ಲಾಡಿ ಮತ್ತು ಶಿರಿಯಾರ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ನಿರ್ಮಿಸಿದ ಕಿಂಡಿ ಅಣೆಕಟ್ಟೆ ಎಷ್ಟು (ಗ್ರಾಮವಾರು ಮತ್ತು ವರ್ಷವಾರು ತಿಳಿಸುವುದು)

ಆ) ಭೂಸಾರ ಸಂರಕ್ಷಣೆ ಯೋಜನೆಯಲ್ಲಿ ನಿರ್ಮಿಸಲಾದ ಕಿಂಡಿ ಅಣೆಕಟ್ಟುಗಳು ಬಹಳಷ್ಟು ಕಳಪೆ ಆಗಿದ್ದು ಮೂಲ ಉದ್ದೇಶಕ್ಕೆ ವ್ಯತಿರಿಕ್ತವಾಗಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆಯೇ?

ಇ) ಈ ಬಗ್ಗೆ ಸರ್ಕಾರ ತನಿಖೆ ನಡೆಸುವೆ?

ಶ್ರೀ ಸಿ.ಬೈರೇಗೌಡ (ಕೃಷಿ ಸಚಿವರು):